# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್:44:2022-23 ದಿನಾಂಕ:06.08.2022

## ಬಾಗಲಗುಂಟೆ ವಾರ್ಡ್-14 ಸಮಿತಿ ಸಭೆಯ ನಡವಳಿಗಳು

ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿ.16.04.2021ರ ಆದೇಶದಂತೆ ದಿ.06.08.2022 ರಂದು ನಡೆದ ಬಾಗಲಗುಂಟೆ ವಾರ್ಡ್ ನಂ.14ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಸಭೆಗೆ ಹಾಜರಾಗಿದ್ದವರ ವಿವರಗಳು:-

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಕೆ.ಮರುಳಸಿದ್ದಪ್ಪ | ಕಾರ್ಯಪಾಲಕ ಅಭಿಯಂತರರು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು |
| 2 | ಶ್ರೀ.ವೆಂಕಟೇಶಪ್ಪ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ನಂ.14, ಬಾಗಲಗುಂಟೆ |
| 3 | ಶ್ರೀ.ತನಯ್ ಕುಮಾರ್ ಎ | ಸಹಾಯಕ ಅಭಿಯಂತರರು |
| 4 | ಶ್ರೀ.ಮೋಹನ್ ಗೌರೋಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ರವಿಕುಮಾರ್ ಆರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 6 | ಶ್ರೀ.ಮಂಜುನಾಥ್ ಡಿ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 7 | ಶ್ರೀ.ಬಿ.ಕೃಷ್ಣಮೂರ್ತಿ | ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 8 | ಶ್ರೀ.ವೆಂಕಟರಮಣ ಹೊಳ್ಳ | ರಾಯಲ್ ಎನ್‌ಕ್ಲೇವ್, ವಾರ್ಡ್ ಸಮಿತಿ ಸದಸ್ಯರು |
| 9 | ಶ್ರೀ.ಹನುಮಂತರಾಯಪ್ಪ | ನಾಗರೀಕ ಹಿತ ರಕ್ಷಣಾ ಸಮಿತಿ , ಹಾವನೂರು ಬಡಾವಣೆ |
| 10 | ಶ್ರೀಮತಿ.ಡಿ ಜ್ಯೋತಿ | ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 11 | ಹೆಚ್.ರಮೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.14 |
| 12 | ಶ್ರೀ.ಲಕ್ಷ್ಮಿ ವೆಂಕಟೇಶ್, | ವಾರ್ಡ್ ಸಮಿತಿ ಸದಸ್ಯರು, ಮುನಿಕೊಂಡಪ್ಪ ಬಡಾವಣೆ |
| 13 | ಶ್ರೀ.ಅಂಜನಮೂರ್ತಿ | ಬಿಬಿಎಂಪಿ ಮಾರ್ಷಲ್ |
| 14 | ಶ್ರೀ.ಕೆ.ಎನ್.ರಾಜಪ್ಪ | ಅರಣ್ಯ ಇಲಾಖೆ ಬಿಬಿಎಂಪಿ |
| 15 | ಶ್ರೀ.ಶಿವಲಿಂಗಯ್ಯ | ಕಂದಾಯ ಇಲಾಖೆ, ಬಿಬಿಎಂಪಿ |
| 16 | ಶ್ರೀ.ಕೃಷ್ಣಪ್ಪ | ಅರಣ್ಯ ಇಲಾಖೆ ಬಿಬಿಎಂಪಿ |
| 17 | ಶ್ರೀ.ಆನಂದ ಜಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.19 ಡಿಫೆನ್ಸ್ ಕಾಲೋನಿ |
| 18 | ಶ್ರೀ.ರಂಗನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.18 ಬಾಗಲಗುಂಟೆ |
| 19 | ಶ್ರೀ.ವೆಂಕಟೇಶ್ | ಎಸ್.ಡಬ್ಲ್ಯೂ.ಎಂ ಮೇಲ್ವಿಚಾರಕರು |
| 20 | ಶ್ರೀ.ನರಸಿಂಹಪ್ಪ | ಎಸ್.ಡಬ್ಲ್ಯೂ.ಎಂ ಮೇಲ್ವಿಚಾರಕರು |
| 21 | ಶ್ರೀ.ರವಿ | ಎಸ್.ಡಬ್ಲ್ಯೂ.ಎಂ ಮೇಲ್ವಿಚಾರಕರು |
| 22 | ಶ್ರೀ.ಜ್ಯೋತಿ ಬಾಬು | ಎಸ್.ಡಬ್ಲ್ಯೂ.ಎಂ ಮೇಲ್ವಿಚಾರಕರು |
| 23 | ಶ್ರೀ.ಡಾ||ಹರ್ಷಿತ್ | ಆರೋಗ್ಯಾಧಿಕಾರಿಗಳು, ಬಿಬಿಎಂಪಿ |
| 24 | ಶ್ರೀ.ಗೋಪಾಲಯ್ಯ ಸಿ | ಸಹಾಯಕ ಅಭಿಯಂತರರು, ಬೆಸ್ಕಾಂ |
| 25 | ಶ್ರೀ.ಮುದ್ದಹನುಮೇಗೌಡ | ನಾಗರೀಕ ಹಿತ ರಕ್ಷಣಾ ಸಮಿತಿ ಸದಸ್ಯರು, ಸಿಡೇದಹಳ್ಳಿ |

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆಧ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- <u>ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ.</u>

➢ ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿ ನೀರು ಸರಬರಾಜು ಸರಿಯಾದ ಮಾರ್ಗದಲ್ಲಿ ಸರಬರಾಜು ಆಗುತ್ತಿರುವುದರಿಂದ ನೀರಿನ ಅಭಾವವು ಇರುವುದಿಲ್ಲವೆಂದು ವಾರ್ಡ್ ಕಮಿಟಿ ಸದಸ್ಯರು ತಿಳಿಸಿದರು.

➢ ಬಾಗಲಗುಂಟೆ ವಾರ್ಡ್‌ನ ಡಿಫೆನ್ಸ್ ಬಡಾವಣೆಯಲ್ಲಿ ಮನೆಮನೆಗಳಿಗೆ ಕಾವೇರಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಅಳವಡಿಸಲಾಗಿರುವ ಮೀಟರ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಇದರಿಂದ ಮೀಟರ್‌ನ ರೀಡಿಂಗ್ ಹೆಚ್ಚಾಗಿ, ಹೆಚ್ಚುವರಿ ನೀರಿನ ಬಿಲ್ ಬರುತ್ತಿರುವುದಾಗಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಗೆ ತುರ್ತು ಕ್ರಮವಹಿಸಲು ಸೂಚಿಸಲಾಯಿತು.

➢ ಒಳಚರಂಡಿ ವ್ಯವಸ್ಥೆಗಾಗಿ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕತ್ತರಿಸಿರುವುದು ಕಂಡುಬಂದಿರುತ್ತದೆ. ಸದರಿ ವಿಷಯಗಳ ದುರಸ್ಥಿ ಕಾರ್ಯವನ್ನು ತುರ್ತಾಗಿ ನಿರ್ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರಿಗೆ ಸೂಚಿಸಲಾಯಿತು.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

- <u>ಬೆಸ್ಕಾಂಗೆ ಸಂಬಂಧಪಟ್ಟ ವಿಷಯದ ಬಗ್ಗೆ.</u>

➢ ಬೆಸ್ಕಾಂ ಇಲಾಖೆಯಿಂದ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಅಗೆದಿರುವ ಗುಂಡಿಗಳನ್ನು ತುರ್ತಾಗಿ ದುರಸ್ಥಿಪಡಿಸಲು ಬೆಸ್ಕಾಂ ಸಹಾಯಕ ಅಭಿಯಂತರರನ್ನು ಕೋರಿದರು.

➢ ನೂತನ ಸಹಾಯಕ ಅಭಿಯಂತರರಾದ ಗೋಪಾಲಯ್ಯ ಸಿ ರವರು 11 ಕೆ.ವಿ ಕೇಬಲ್ ಅಳವಡಿಸುವ ಕಾಮಗಾರಿಯನ್ನು ರಾಮಯ್ಯ ಬಡಾವಣೆಯಲ್ಲಿ ಭಾಗಶಃ 90% ಮುಗಿಸಿರುತ್ತಾರೆ ಎಂದು ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿದರು.

➢ ಹೊಸ ಎಲ್.ಇ.ಡಿ ಬಲ್ಬ್‌ಗಳನ್ನು ಖಾಲಿ ಇರುವ ಕಂಬಗಳಿಗೆ ಹಾಕಬೇಕು ಎಂದು ವಾರ್ಡ್ ಕಮಿಟಿ ಸದಸ್ಯರು ಕೋರಿದರು. ಸದರಿ ವಿಷಯಗಳ ಬಗ್ಗೆ ತುರ್ತು ಕ್ರಮವಹಿಸಲು ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ಸೂಚಿಸಲಾಯಿತು.

ಕ್ರಮ:ಬೆಸ್ಕಾಂ ಇಲಾಖೆ, ವಾ-14/ಸದಸ್ಯ ಕಾರ್ಯದರ್ಶಿ

- <u>ಘನತ್ಯಾಜ್ಯ ನಿರ್ವಹಣೆ ಬಗ್ಗೆ.</u>

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಘನತ್ಯಾಜ್ಯ ವಿಲೇವಾರಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು. 35 ಆಟೋಗಳು 35 ಬ್ಲಾಕ್‌ಗಳಲ್ಲಿ ಸಮರ್ಪಕವಾಗಿಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದರು ಹಾಗೂ ಘನತ್ಯಾಜ್ಯವನ್ನು ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಮೇಲ್ವಿಚಾರಕರುಗಳು ಹಾಜರಿದ್ದು, ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು.

ಬಾಗಲಗುಂಟೆ ವ್ಯಾಪ್ತಿಯ ರಾಯಲ್ ಎನ್‌ಕ್ಲೇವ್ ಬಡಾವಣೆಯಲ್ಲಿ ಮನೆಮನೆಗಳಿಂದ ಕಸ ಸಂಗ್ರಹಿಸುವ ಆಟೋಗಳು ಸರಿಯಾಗಿ ಬರುತ್ತಿರುವುದಿಲ್ಲ ಎಂದು ವಾರ್ಡ್ ಸಮಿತಿ ಸದಸ್ಯರು ತಿಳಿಸಿದರು. ಸದರಿ ವಿಷಯಗಳ ಬಗ್ಗೆ ತುರ್ತು ಕ್ರಮವಹಿಸಲು ಸಂಬಂಧಪಟ್ಟ ಘನತ್ಯಾಜ್ಯ ಇಲಾಖೆಯವರಿಗೆ ಸೂಚಿಸಲಾಯಿತು

ಕ್ರಮ:ಸ.ಕಾ.ನಿ.ಅ (ಘ.ತ್ಯಾ.ನಿ)/ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು

- **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

ಒಟ್ಟು ಪ್ರಕರಣಗಳು 9118
ಬಿಡುಗಡೆಯಾದ ಪ್ರಕರಣಗಳು 8948
ಸಕ್ರಿಯ ಪ್ರಕರಣಗಳು 09
ಮರಣ 161 ಇರುತ್ತದೆಂದು ಹಾಗೂ ಸಧ್ಯದ ಪರಿಸ್ಥಿತಿಯಲ್ಲಿ 12 ರಿಂದ 14 ವರ್ಷದ ವಯಸ್ಸಿನ ಲಸಿಕೆ ಹಾಕುವ ಕಾರ್ಯಕ್ರಮ ನಡೆಯುತ್ತಿದ್ದು, ಶೇ.100% ಲಸಿಕೆಯನ್ನು ನೀಡಲಾಗಿದೆ ಮತ್ತು 15-18 ವಯಸ್ಸಿನವರಿಗೆ 90% ಹಾಗೂ ಬೂಸ್ಟರ್ ಡೋಸ್ 96% (60 ವಯಸ್ಸಿನ ಮೇಲ್ಪಟ್ಟವರಿಗೆ) ನೀಡಲಾಗಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮೋಹನ್ ಗೌರೋಜಿ ರವರು ತಿಳಿಸಿದರು. ಹಾಗೂ ಪಾಲಕರು ಮಕ್ಕಳನ್ನು ಆಸ್ಪತ್ರೆಯ ಹತ್ತಿರ ಕರೆ ತಂದು ಲಸಿಕೆ ಹಾಕಿಸಲು ವಾರ್ಡ್‌ನ ನಿವಾಸಿಗಳಿಗೆ ತಿಳಿಸಲು ವಾರ್ಡ್ ಸಮಿತಿ ಸದಸ್ಯರಿಗೆ ಕೋರಲಾಯಿತು.

ಕ್ರಮ: ಕೋವಿಡ್ ಆರೋಗ್ಯ ವೈದ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

- **ಇತರೆ ವಿಷಯಗಳ ಬಗ್ಗೆ.**

➢ ಬಿಬಿಎಂಪಿ ಮಾರ್ಷಲ್‌ಗಳು ಕಳಪೆ ಗುಣಮಟ್ಟದ ಪ್ಲಾಸ್ಟಿಕ್ ಬಳಸುತ್ತಿರುವ ಅಂಗಡಿ ಮಾಲೀಕರುಗಳು, ಬೀದಿಬದಿ ವ್ಯಾಪಾರಿಗಳಿಗೆ ಇನ್ನಿತರೆಯವರುಗಳಿಗೆ ದಂಡ ವಿಧಿಸುತ್ತಿರುತ್ತಾರೆ.

➢ ಕಂದಾಯ ಇಲಾಖೆಯವರು ಮತದಾರರ ಪರಿಷ್ಕರಣೆ ವಿಷಯದ ಬಗ್ಗೆ ಚರ್ಚಿಸಿದರು.

➢ ಬಾಗಲಗುಂಟೆ ವಾರ್ಡ್‌ನ ಸೌಂದರ್ಯ ಬಡಾವಣೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಿಸುತ್ತಿರುವ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ವಾರ್ಡ್ ಅಭಿಯಂತರರು ತಿಳಿಸಿದರು.

ಸ.ಅ ವಾ.14/ ಸ.ಕಾ.ನಿ.ಅ (ದಾಸರಹಳ್ಳಿ ಉಪ-ವಿಭಾಗ)

ಸಹಾಯಕ ಅಭಿಯಂತರರು
ಹಾಗೂ ಸದಸ್ಯ ಕಾರ್ಯದರ್ಶಿ ವಾರ್ಡ್ ಸಮಿತಿ

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ
ಮತ್ತು ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧಿಕಾರಿಗಳ ಮಾಹಿತಿಗಾಗಿ:-

1) ಸನ್ಮಾನ್ಯ ಶ್ರೀ.ಆರ್.ಮಂಜುನಾಥ್ ರವರು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
3) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
4) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
5) ಆರೋಗ್ಯ ವೈದ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ
12) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಕಲ್ಯಾಣಾಧಿಕಾರಿಗಳು (ದಾವ) ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಕಛೇರಿ ಪ್ರತಿ.